ದಿನಾಂಕಃ 27.10.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಜಿ.ಬಿ.ವಿ. ವಕೀಲರಿಂದ:**

ಪ್ರಸ್ತುತ ಪ್ರಕರಣವನ್ನು ಹೂಡಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ವಾದಿಯು ನನ್ನ ತಾಯಿ. ವಾದಿಯು ಅನಾರೋಗ್ಯದಿಂದ ಬಳಲುತ್ತಿರುವ ಕಾರಣ ವಿಶೇಷ ಅಧಿಕಾರ ಪತ್ರವನ್ನು ನನಗೆ ನೀಡಿರುತ್ತಾರೆ. ಸದರಿ ಪತ್ರವನ್ನು ಮೂಡಿಗೆರೆಯಲ್ಲಿ ಮಾಡಿಸಲಾಗಿರುತ್ತದೆ. ವಾದಿಯು ಅನಾರೋಗ್ಯದಿಂದ ಬಳಲುತ್ತಿದ್ದಾರೆ ಎಂದು ತೋರಿಸಲು ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ಅಹಮದ್ ಬ್ಯಾರಿ, ಅಬ್ದುಲ್ ಖಾದರ್, ಹಾಜಿರಾಬಿ, ಬಿ. ಫಾತೀಮ ರವರು ನನ್ನ ಅಜ್ಜ ಮತ್ತು ಚಿಕ್ಕಪ್ಪಂದಿರು. ಬಿ. ಅಹಮದ್ ರವರು ನನ್ನ ಚಿಕ್ಕಪ್ಪ. ಬಿ. ಮೊಹಮ್ಮದ್ ಎಂಬುವವರು  ಅಹಮದ್ ಬ್ಯಾರಿ, ಅಬ್ದುಲ್ ಖಾದರ್, ಹಾಜಿರಾಬಿ, ಬಿ. ಫಾತೀಮ ರವರುಗಳ ವಿರುದ್ಧ ಅಸಲು ದಾವಾ 212/1992 ರಡಿಯಲ್ಲಿ ದಾವೆಯನ್ನು ದಾಖಲಿಸಿದ್ದರು ಎಂದರೆ ಸರಿ. ಸದರಿ ಪ್ರಕರಣದಲ್ಲಿ ನನ್ನ ತಂದೆಯು ಪಕ್ಷಗಾರರಾಗಿದ್ದರು ಎಂದರೆ ಸರಿ. ಸದರಿ ದಾವೆಯನ್ನು ಯಾವುದರ ಕುರಿತು ದಾಖಲಿಸಿದ್ದರು ಎಂಬುದರ ಬಗ್ಗೆ ನನಗೆ ತಿಳಿದಿರುವುದಿಲ್ಲ. ಸದರಿ ಪ್ರಕರಣದದಲ್ಲಿ ನನ್ನ ತಂದೆ ಮರಣಹೊಂದಿದ ನಂತರ ನನ್ನ ತಾಯಿ ನಮ್ಮಗಳ ಪರವಾಗಿ ಹಾಜರಾಗಿ ರಾಜಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಪ್ರಸ್ತುತ ದಾವೆಯನ್ನು ದಾಖಲಿಸುವ ಪೂರ್ವದಲ್ಲಿ ಅಸಲು ದಾವಾ ಸಂಖ್ಯೆ 212/1992 ರ ಚೆಕ್ಕುಬಂದಿಯನ್ನು ಮತ್ತು ಜಾಗದ ವಿಚಾರದ ಬಗ್ಗೆ ತಿಳಿದುಕೊಂಡಿರುತ್ತೇನೆ.

ಅಸಲು ದಾವಾ ಸಂಖ್ಯೆ 212/1992 ರ ದಾವೆಯ ಚೆಕ್ಕುಬಂದಿಯು ಪೂರ್ವಕ್ಕೆ ಪ್ರಸ್ತುತ ಪ್ರಕರಣದ ಪ್ರತಿವಾದಿಯವರ ಜಮೀನು, ಪಶ್ಚಿಮಕ್ಕೆ ಅನಂತರಾಜಯ್ಯ ಎಂಬುವವರ ಜಮೀನು, ಉತ್ತರಕ್ಕೆ ಮೀನು ಮಾರುಕಟ್ಟೆಯ ರಸ್ತೆ ಮತ್ತು ದಕ್ಷಿಣಕ್ಕೆ ಮಹಾವೀರ ರಸ್ತೆ ಇರುತ್ತದೆ. ಸದರಿ ದಾವೆಯಲ್ಲಿ 40*60 ಅಡಿ ಜಾಗಕ್ಕೆ ದಾವೆಯನ್ನು ದಾಖಲಿಸಲಾಗಿರುತ್ತದೆ. ಅಸಲು ದಾವೆಯ 212/1992 ರಲ್ಲಿ ಹಾಜರುಪಡಿಸಿದಂತ ದಾಖಲಾತಿಗಳನ್ನು ಪ್ರಸ್ತುತ ದಾವೆಯಲ್ಲಿ ಹಾಜರುಪಡಿಸಿರಬಹುದು. 60-*40 ಅಡಿ ಜಾಗವನ್ನು ಹೊರತು ಪಡಿಸಿ ಇತರೆ ಯಾವುದೇ ಜಮೀನು ನಮಗಿರುವುದಿಲ್ಲ. 212/1992 ರಲ್ಲಿ ಯಾವ ರೀತಿ ರಾಜಿ ಮಾಡಿಕೊಂಡಿರುತ್ತೇವೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಒಂದು ಬಾರಿ ಒಂದು ಜಮೀನಿನ ಮೇಲೆ ದಾಖಲೆ ನೀಡಿದ್ದಲ್ಲಿ ಇನ್ನೊಂದು ಬಾರಿ ಅದೇ ಜಮೀನಿಗೆ ಸಂಬಂಧಿಸಿದಂತೆ ದಾಖಲಾತಿ ನೀಡಲು ಆಗುವುದಿಲ್ಲ ಎಂದರೆ ಸರಿ. ಪ್ರಸ್ತುತ ದಾವೆಯ ಚೆಕ್ಕುಬಂದಿಯು ಮೇಲೆ ಹೇಳಿದ ಚೆಕ್ಕುಬಂದಿಯಾಗಿರುತ್ತದೆ. ಪ್ರಸ್ತುತ ದಾವೆಯಲ್ಲಿ ಹಕ್ಕು ಪತ್ರ ಮತ್ತು ಇತರೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಜಮೀನು 2015 ನೇ ಇಸವಿಯಲ್ಲಿ ಮಂಜೂರಾಗಿರಬಹುದು. ನಿಪಿ-2 ಸದರಿ ಹಕ್ಕು ಪತ್ರವಾಗಿರುತ್ತದೆ. 212/1992 ರಲ್ಲಿ ನಮೂದಿಸಿರುವ ಚೆಕ್ಕುಬಂದಿಯೂ ಮತ್ತು ನಿಪಿ-2 ರಲ್ಲಿ ಇರುವ ಚೆಕ್ಕುಬಂದಿಯೂ ಎರಡೂ ಒಂದೇ ಎಂದರೆ ಸರಿ.

ಹಕ್ಕುಪತ್ರವನ್ನು ಪಡೆಯುವ ಪೂರ್ವದಲ್ಲಿ ಕಲಂ 94 ಸಿ ರಡಿಯಲ್ಲಿ ಸಲ್ಲಿಸಿರುವ ಅರ್ಜಿಯನ್ನು ಹಾಜರುಪಡಿಸಿರಬಹುದು. ಆ ರೀತಿಯಾಗಿ ನಾನು ಯಾವುದೇ ಅರ್ಜಿಯನ್ನು ಹಾಜರುಪಡಿಸದಿದ್ದರೂ ಸಹಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯವರಿಗೆ ಸಂಬಂಧಿಸಿದ ಹಕ್ಕು ಪತ್ರ ಮತ್ತು ಇತರೆ ದಾಖಲಾತಿಯನ್ನು ಪರಿಶೀಲಿಸಿರುತ್ತೇನೆ. ಪ್ರತಿವಾದಿಯವರಿಗೆ ಸಂಬಂಧಿಸಿದ ದಾಖಲಾತಿಗಳನ್ನು ಹಾಜರುಪಡಿಸಿರಬಹುದು. ಪ್ರಸ್ತುತ ದಾವೆಯನ್ನು ಆರೋಪಿಯು ಪರವಾನಿಗೆಯಲ್ಲಿ ನಮೂದಿಸಿರುವಂತೆ ಮನೆ ಕಟ್ಟುವ ಸಮಯದಲ್ಲಿ ಜಾಗವನ್ನು ಬಿಟ್ಟು ಕಟ್ಟಿರುವುದಿಲ್ಲ ಎಂಬುದರ ಬಾಬ್ತು ಸಲ್ಲಿಸಿರುತ್ತೇನೆ. ಪಂಚಾಯ್ತಿಯ ನಿಯಮದ ಪ್ರಕಾರ ಮನೆ ಕಟ್ಟುವಾಗ ಎಲ್ಲರೂ 2 ½ ಅಡಿ ಜಾಗವನ್ನು ಬಿಟ್ಟು ಕಟ್ಟಬೇಕು ಎಂದರೆ ಸರಿ. ಪ್ರತಿವಾದಿಯವರು 2 ½ ಅಡಿ ಜಾಗಬಿಟ್ಟು ಮನೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಹಕ್ಕುಪತ್ರವನ್ನು ಪಡೆಯುವ ಸಂದರ್ಭದಲ್ಲಿ ಪಡೆದುಕೊಂಡಂತಹ ನಕ್ಷೆಯನ್ನು ಹಾಜರುಮಾಡಿರಬಹುದು. ಸದರಿ ನಕ್ಷೆಯಲ್ಲಿ ನಮಗೆ ಸೇರಿದ್ದ ಜಾಗವು 60*40 ಎಂದು ನಮೂದಾಗಿರುತ್ತದೆ. ಸದರಿ 60*40 ಅಡಿ ಜಾಗವನ್ನು ಹೊರತು ಪಡಿಸಿ ಬೇರೆ ಜಾಗದ ಮೇಲೆ ನಮಗೆ ಹಕ್ಕು ಇರುವುದಿಲ್ಲ ಎಂದರೆ ಸರಿ. ನಮ್ಮ ಮತ್ತು ಪ್ರತಿವಾದಿಯವರ ಜಾಗದ ನಡುವೆ 2½ ಅಡಿ ಅಂತರವಿರುತ್ತದೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.